ಓ. ಎಸ್. ನಂಃ 68/2016

ಪಿ. ಡಬ್ಲ್ಯೂಃ 1

ದಿಃ 04-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ ಶ್ರೀ ಎ ಎ ಜಿ ಪ್ರತಿವಾದಿ ಪರ ವಕೀಲರಿಂದ.**

ನಿಪಿ-14 ರಲ್ಲಿ ಸರ್ವೆ ನಂ.46 ಒಟ್ಟು ಕ್ಷೇತ್ರ 15 ಎಕರೆ 19 ಗುಂಟೆ ವಿಸ್ತೀರ್ಣ ಇದೆ ಎಂದರೆ ಸರಿ . ಸರ್ವೇ ನಂ. 46 ಹಿಸ್ಸಾ 7 ,5 ಮತ್ತು 10 ರಲ್ಲಿ 8 ಎಕರೆ 19 ಗುಂಟೆ ಎಂದು ಇದೆ ಎಂದರೆ ಸರಿ. ನಿಪಿ-14 ರ ಕಾಲಂ ನಂ. 5 ರಲ್ಲಿ ಒಟ್ಟು ಕ್ಷೇತ್ರ 7 ಎಕರೆ 12 ಗುಂಟೆ ಎಂದರೆ ಸರಿ. ಅದರಲ್ಲಿ 8 ಎಕರೆ 19 ಗುಂಟೆಯನ್ನು ರೌಂಡಪ್ ಮಾಡಿ 4 ಎಕರೆ 13 ಗುಂಟೆ ಎಂದು ನಮೂದಿಸಿದ್ದಾರೆ ಎಂದರೆ ಸರಿ . ನಿಪಿ 14 ರ ಕಾಲಂ ನಂ. 11 ರಲ್ಲಿ ರೈತರ ಹೆಸರು ಹುಸೇನಬಿ ಕೋಂ ಶಾಬುದ್ದೀನ ಸಾಬ ತೋಟದ ಎಂದು ನಮೂದು ಇದೆ ಎಂದರೆ ಸರಿ . ನಿಪಿ 14 ರ ಕಾಲಂ ನಂ. 12 ರಲ್ಲಿ ಸದರಿ ಯವರ ಸಹಿ ಇದೆ ಎಂದರೆ ಸರಿ . ಹುಸೇನಸಾಬ ಹುಸೇನಬಿ ಅವರ ಮಗ ಎಂದರೆ ಸರಿ .

2. ಹುಸೇನಬಿ ಅವರಿಗೆ ಹುಸೇನಸಾಬ ಹೊರತು ಪಡಿಸಿ ಬೇರೆ ಮಕ್ಕಳು ಇದ್ದಾರೆ ಎಂದರೆ ಸರಿ. ಕಾಲಂ ನಂ. 10 ರಲ್ಲಿ ಹುಸೇನಬೀ ಅವರ ಸಹಿ ಮಾತ್ರ ಇದೆ ಎಂದರೆ ಸರಿ . ಹುಸೇನಬಿ ಅವರ ವಾರಸುದಾರರ ಸಹಿ ಮಾಡಿಸಲು ನಿಮಗೆ ತೊಂದದರೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ಕುಟುಂಬದಲ್ಲಿ ಒಬ್ಬರ ಸಹಿ ಮಾತ್ರ ಮಾಡಿಸಿದ್ದೇವೆ ಎಲ್ಲರ ಸಹಿ ಮಾಡಿಸಲು ಆಗುವುದಿಲ್ಲ. ಕಾನೂನಿನಲ್ಲಿ ಕುಟುಂಬದ ಒಬ್ಬ ವ್ಯಕ್ತಿ ಸಹಿ ಮಾತ್ರ ಹಾಕಿದರೂ ಸಾಕು ಎಂಬುದನ್ನು ಒಪ್ಪುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಹುಸೇನಬೀ ಅವರ ಮಕ್ಕಳು ವಹಿವಾಟು ಮಾಡುತ್ತಾರೆ ಎಂದರೇ ಸರಿ. ಹುಸೇನಬಿ ಅವರ ಮಕ್ಕಳು ಪ್ರತ್ಯೇಕವಾಗಿ ವಾಸ ಮಾಡುತ್ತಾರೆ ಎಂದರೆ ಸರಿ. ಹುಸೇನಬೀ ಅವರ ಇತರೇ ಮಕ್ಕಳ ಗಮನಕ್ಕೆ ತರದೇ ಇದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-14 ರ ಪ್ರಕಾರ ಒಟ್ಟು ಕ್ಷೇತ್ರ 9 ಎಕರೆ 33 ಗುಂಟೆ ಅಗುತ್ತದೆ ಎಂದರೆ ಸರಿಯಲ್ಲ.

ಓ. ಎಸ್. ನಂಃ 68/2016

ಪಿ. ಡಬ್ಲ್ಯೂಃ 1

3. ನಿಪಿ-14 2002 ರಲ್ಲಿ ಅಗಿದೆ . ಸದರಿ ದಾಖಲೆ 03-11-2023 ಇದೆ ಎಂದರೆ ಸದರಿ ದಾಖಲೆ ಪಡೆದ ದಿನಾಂಕ. ನಿಪಿ-14 ಖೊಟ್ಟಿ ದಾಖಲೆ ಇದೆ ಎಂದರೆ ಸರಿಯಲ್ಲ. ಸದರಿ ಕಾಗದದ ಪ್ರಕಾರ ಕ್ಷೇತ್ರ ಹೊಂದಾಣಿಕೆ ಆಗುವುದಿಲ್ಲ ಹಾಗೂ ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ದಾಖಲಾತಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಮೇಲೆ ಶಿವನಗೌಡ ಹೆಬ್ಬಾಳ ರವರ ಮಗ ಒಂದು ದಾವೆ ಮಾಡಿ ಅದು ಚಾಲ್ತಿಯಲ್ಲಿ ಇದೆ ಎಂದರೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶಿಗ್ಗಾಂವ.